## ***INSTRUCTION IN ENGLISH***

## ***How to apply: Guidelines for filling up Online Application:***

***The Candidates are suggested to use Google Chrome or Mozilla Firefox Browser***

i. *Candidates should first visit to the Bank's website www.scdccbank.com and open the appropriate Online Application Format available under recruitment link.*

ii. *Fill the application with required fields.*

iii. *Candidates should fill up the application carefully. Once, the Application is filled up and submitted, no change/edit is possible.*

iv. *After filling the application, please click on "Preview Application" button to view the filled application.*

v. *If all details are correct then please click on "Submit Application" button to submit the application.*

vi. *After submission, you will receive a "Successfully submitted message". To take the printout of the application, please click on "download" link. This will open filled application in PDF format, save the application in local system and take the printout.*

vii. *After submission of the application through on line, candidate should take a printout of the filled application. The Candidates should affix the latest passport size photo to the application and sign the application in the space provided. The Candidates should remit the application fees in any of our Branches through Pay- in-slip or by draft /pay order in favour of "The S.C.D.C.C Bank Ltd., Mangalore". The filled up application with signature, photo and counterfoil of the Pay- in-slip or D.D./Pay order and copies of all certificates required should be submitted to The Chief Executive Officer, The South Canara District Central Cooperative Bank Ltd., Kodialbail, Mangalore – 575 003 on or before 10-01-2018 before close of office hours. Those in employment should submit their applications through Employer.*

***No Application will be valid unless the proper application fees will be paid.***

*Incomplete applications and applications received after the last date prescribed will not be considered. Candidate must appear for written test and interview at their own cost when called for.*

***Member Secretary/Chief Executive Officer***

# ***INSTRUCTION IN KANNADA***

## ಅರ್ಜಿ ನೋಂದಾಯಿಸುವ ಕ್ರಮ: ಆನ್‌ಲೈನ್ ಮುಖಾಂತರ ಅರ್ಜಿಯನ್ನು ಭರ್ತಿ ಮಾಡುವ ಬಗ್ಗೆ ಮಾರ್ಗಸೂಚಿ:

ಅಭ್ಯರ್ಥಿಗಳು **Google Chrome** ಅಥವಾ **Mozilla Firefox** ಬ್ರೌಸರನ್ನು ಉಪಯೋಗಿಸುವಂತೆ ಸೂಚಿಸಲಾಗಿದೆ.

1. ಅಭ್ಯರ್ಥಿಗಳು ಮೊದಲಿಗೆ ಈ ಬ್ಯಾಂಕಿನ ಅಂತರ್ಜಾಲ (Website: www.scdccbank.com) ವನ್ನು ತೆರೆದು ಅದರಲ್ಲಿ ಸಿಗುವ ನೇಮಕಾತಿಗೆ ಸಂಬಂಧಿಸಿದ ಅರ್ಜಿ ಫಾರ್ಮನ್ನು ಆನ್‌ಲೈನ್ ಮುಖಾಂತರ ಭರ್ತಿಗೊಳಿಸಿ ಸಲ್ಲಿಸತಕ್ಕದ್ದು.
2. ಅಗತ್ಯದ ಮಾಹಿತಿಗಳೊಂದಿಗೆ ಅರ್ಜಿಯನ್ನು ಭರ್ತಿಗೊಳಿಸತಕ್ಕದ್ದು.
3. ಅಭ್ಯರ್ಥಿಗಳು ಅರ್ಜಿಯನ್ನು ಬಹಳ ಜಾಗರೂಕತೆಯಿಂದ ಭರ್ತಿಮಾಡತಕ್ಕದ್ದು. ಒಂದು ಸಲ ಭರ್ತಿ ಮಾಡಿ ಕಳುಹಿಸಿದ ಅರ್ಜಿಯನ್ನು ತಿದ್ದುಪಡಿ ಮಾಡುವ ಅವಕಾಶ ಇರುವುದಿಲ್ಲ.
4. ಅರ್ಜಿಯನ್ನು ಭರ್ತಿಗೊಳಿಸಿದ ಬಳಿಕ ದಯವಿಟ್ಟು *"Preview Application"* ಒತ್ತುಗುಂಡಿಯನ್ನು ಒತ್ತಿ ಭರ್ತಿಗೊಳಿಸಿದ ಅರ್ಜಿಯನ್ನು ಪರಿಶೀಲಿಸುವುದು.
5. ಭರ್ತಿ ಮಾಡಿದ ಅರ್ಜಿಯಲ್ಲಿನ ವಿವರಗಳು ಸರಿಯಾಗಿದ್ದಲ್ಲಿ, ದಯವಿಟ್ಟು *"Submit Application"* ಒತ್ತುಗುಂಡಿಯನ್ನು ಒತ್ತಿ ಅರ್ಜಿಯನ್ನು ಒಪ್ಪಿಸುವುದು.
6. ಅರ್ಜಿಯನ್ನು ಒಪ್ಪಿಸಿದ ಬಳಿಕ **"ಅರ್ಜಿಯನ್ನು ಯಶಸ್ವಿಯಾಗಿ ಒಪ್ಪಿಸಲಾಗಿದೆ"** ಎಂಬ ಸಂದೇಶ ಬರುವುದು. ಅರ್ಜಿಯ ಮುದ್ರಿತ ಪ್ರತಿಯನ್ನು ಪಡೆಯುವರೇ ದಯವಿಟ್ಟು *"download"* ಎಂಬ ಸಂಪರ್ಕದ ಮೇಲೆ ಒತ್ತಿದಾಗ ಭರ್ತಿಯಾದ ಅರ್ಜಿಯು *PDF* ನಮೂನೆಯಲ್ಲಿ ತೆರೆದುಕೊಳ್ಳುವುದು. ಇದನ್ನು ತಮ್ಮ ಗಣಕಯಂತ್ರದಲ್ಲಿ ದಾಖಲಿಸಿ ಉಳಿಸಿಕೊಳ್ಳಬಹುದು ಹಾಗೂ ಅರ್ಜಿಯ ಮುದ್ರಿತ ಪ್ರತಿಯನ್ನು ಪಡೆಯಬಹುದು.
7. ಭರ್ತಿಗೊಳಿಸಿದ ಅರ್ಜಿಯನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮುಖಾಂತರ ಭರ್ತಿಗೊಳಿಸಿ ಸಲ್ಲಿಸಿದ ನಂತರ ಲಭ್ಯವಾಗುವ ಅರ್ಜಿಯ ಮುದ್ರಿತ ಪ್ರತಿಯನ್ನು (Printout) ಪಡೆದುಕೊಂಡು ಅದರಲ್ಲಿ ತಮ್ಮ ಇತ್ತೀಚಿನ ಭಾವಚಿತ್ರವನ್ನು ಲಗತ್ತಿಸಿ, ಸಹಿ ಎಂದು ಇರುವಲ್ಲಿ ತಮ್ಮ ಸಹಿ ಹಾಕತಕ್ಕದ್ದು. ಅರ್ಜಿ ಶುಲ್ಕವನ್ನು ಈ ಬ್ಯಾಂಕಿನ ಯಾವುದೇ **ಶಾಖೆಯಲ್ಲಿ** ನಗದು ಪಾವತಿ ರಶೀದಿ ಮೂಲಕ ಅಥವಾ **"ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಮಂಗಳೂರು"** ಹೆಸರಿಗೆ ಪಡೆದ ಡಿ.ಡಿ/ಪೇ ಆರ್ಡರ್ ಮೂಲಕ ಪಾವತಿಸಬಹುದು. ಮುದ್ರಿತ ಅರ್ಜಿ ನಮೂನೆಯನ್ನು ಶುಲ್ಕ ಪಾವತಿ ರಶೀದಿ ಅಥವಾ ಡಿ.ಡಿ/ ಪೇ ಆರ್ಡರ್ ಹಾಗೂ ಅರ್ಜಿಯಲ್ಲಿ ಕೇಳಿರುವ ಎಲ್ಲಾ ದಾಖಲೆಗಳ ಪ್ರತಿಗಳೊಂದಿಗೆ **ದಿನಾಂಕ 10-01-2018ರ ಕಛೇರಿ ಸಮಯದೊಳಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಕೊಡಿಯಾಲ್‌ಬೈಲು, ಮಂಗಳೂರು – 575003** ಇವರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಸಂಬಂಧಪಟ್ಟ ಸಂಸ್ಥೆಯ ಮೂಲಕ ಸಲ್ಲಿಸತಕ್ಕದ್ದು.

**ಅರ್ಜಿ ಶುಲ್ಕ ಪಾವತಿಸದ ಅರ್ಜಿಗಳು ಸಿಂಧುವಾಗಿರುವುದಿಲ್ಲ**. ಅಪೂರ್ಣ ಅರ್ಜಿಗಳನ್ನು ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಲಿಖಿತ ಪರೀಕ್ಷೆ ಹಾಗೂ ಸಂದರ್ಶನಕ್ಕೆ ಕರೆದಲ್ಲಿ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

**ಸದಸ್ಯ ಕಾರ್ಯದರ್ಶಿ/ ಮುಖ್ಯ ಕಾರ್ಯನಿರ್ವಹಣಾಧಿಕಾರಿ**